ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಸಚಿವರು):– ಮಾನ್ಯ ಅಧ್ಯಕ್ಷರೆ, ದಿನಾಂಕ: 05.02.2015ರ ಮೂರನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 230 ಪ್ರಶ್ನೆಗಳ ಪೈಕಿ 140 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:– ಮಂಡಿಸಲಾಯಿತು.

(ಅನುಬಂಧ–1)

ಶ್ರೀ ಸಿ.ಟಿ. ರವಿ:– ಪ್ರತಿ ದಿವಸ 40% ಪ್ರಶ್ನೆಗಳಿಗೆ ಉತ್ತರವನ್ನು ಕೊಡುವುದಿಲ್ಲ.

(ಗೊಂದಲ)

ಅಧ್ಯಕ್ಷರು:– ನಾನು ಸರ್ಕಾರದಿಂದ ಉತ್ತರ ಬರುತ್ತಿಲ್ಲವೆಂದು ಆಗಲೇ ಹೇಳಿದ್ದೇನೆ. ನಾನು ಗಮನಿಸಿ ಇದರ ಬಗ್ಗೆ ಸರ್ಕಾರಕ್ಕೆ ಹೇಳಿದ್ದೇನೆ.

(ಗೊಂದಲ)

ಶ್ರೀ ಜಗದೀಶ ಶೆಟ್ಟರ್:– ಆದರೂ ಅವರು ಎಚ್ಚರವಾಗುತ್ತಿಲ್ಲ.

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಮೊದಲನೇ ಪಟ್ಟಿ

ಶ್ರೀ T.B. ಜಯಚಂದ್ರ (ಮಾನ್ಯ ಕಾನೂನು ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):– ಮಾನ್ಯ ಅಧ್ಯಕ್ಷರೆ,